ನನಗೂ ಮತ್ತು ಕುಕ್ಕರಹಳ್ಳಿ ಕೆರೆಗೂ ಇರುವ ಅಂಟು ನಂಟಿನ ಒಂಟನ್ನು (ಒಗಟನ್ನು) ಬಿಡಿಯಾಗಿ ಇಡಿಯಾಗಿ ಬಿಡಿಸಿಡುವ ನನ್ನ ಹಿರಿ ಕಿರಿ ಅನುಭವಕ್ಕೆ ಅಕ್ಷರ ರೂಪವನ್ನು ಕೊಡಲು ನಾನಿಲ್ಲಿ ಪ್ರಯತ್ನಿಸಿದ್ದೇನೆ. ನಿಮ್ಮೊಳಗೆ ಇಡಿಸಿತೋ, ಹಿಡಿಸಿತೋ ಎಂಬುದು ಆ ಮುಂದಿನ ಬೆಳವಣಿಗೆ.

ಜೀವನದಲ್ಲಿ ಒಬ್ಬೊಬ್ಬರಿಗೆ ಒಂದೊಂದು ಪ್ರಿಯವಾದ ಮತ್ತು ಆತ್ಮೀಯವಾದ ಸ್ಥಳವೊಂದಿರುತ್ತದೆ. ಅದು ಪ್ರಕೃತಿದತ್ತವಾದ ಸ್ಥಳವಿರಬಹುದು, ಐತಿಹಾಸಿಕ ಸ್ಥಳವಾಗಿರಬಹುದು, ಸಾಂಸ್ಕೃತಿಕ ಸ್ಥಳವಾಗಿರಬಹುದು, ಧಾರ್ಮಿಕ ಸ್ಥಳವಾಗಿರಬಹುದು ಅಥವಾ ಯಾವುದೇ ಸ್ಥಳವಾಗಿರಬಹುದು ಅದು ವ್ಯಕ್ತಿಯ ಮನಸ್ಸಿನ ಸಾಂತ್ವನಕ್ಕೆ ಕಾರಣವಾಗಿ, ಪ್ರಶಾಂತ ವಾತಾವರಣವೊಂದನ್ನು ನಿರ್ಮಿಸಲು ನೆರವಾಗುತ್ತದೆ. ಮತ್ತು ಚೈತನ್ಯಸ್ವರೂಪಿಯೂ ಆಗಿರುತ್ತದೆ. ಆದಕಾರಣದಿಂದಲೇ ವ್ಯಕ್ತಿಗೆ ಅಂತಹ ಸ್ಥಳ ಆಕರ್ಷಣೀಯವಾಗುವುದು ಸಹಜವೇ ಹೌದು. ಅದು ವ್ಯಕ್ತಿಯ ಸಹಜಸ್ವಭಾವದ ನಡವಳಿಕೆಯೂ ಆಗುತ್ತದೆ. ಅಂಥ ಪ್ರಿಯವಾದ ಮತ್ತು ಚೈತನ್ಯ ಸ್ವರೂಪಿಯಾದ ಸ್ಥಳ ನನ್ನ ಪಾಲಿಗೆ ಕುಕ್ಕರಹಳ್ಳಿ ಕೆರೆ. ಮೈಸೂರು ನಗರದ ಪಶ್ಚಿಮ ಭಾಗದಲ್ಲಿ ಸಾಕಷ್ಟು ವಿಶಾಲ ಪಾತ್ರದಲ್ಲಿ ಹಬ್ಬಿ ಹರಡಿಕೊಂಡಿರುವ ಕೆರೆ, ಸುತ್ತಲೂ ಹಸಿರು ವಲಯದಿಂದ ಆವೃತ್ತವಾಗಿ ಒಂದೊಮ್ಮೆ ನೀರು ಮತ್ತು ಹಸಿರಿನ ಸ್ವಚ್ಛಂದ ಒಡನಾಟದಿಂದಾಗಿ ಪಕ್ಕಾ ಪ್ರಕೃತಿ ತಾಣವೇ ಆಗಿತ್ತು. ಈಗ ಆ ಪ್ರಕೃತಿ ಸಂಪತ್ತು ಮನುಷ್ಯನ ವಿಕೃತ ಮನಸ್ಸು, ಅಭಿವೃದ್ಧಿಯ ಕೆಲವೊಂದು ಅಪದ್ಧಗಳಿಂದಾಗಿ ಕುಂದನ್ನನುಭವಿಸುತ್ತಿದ್ದರೂ ತನ್ನ ಮೂಲ

